೫) ಶಿವಮೊಗ್ಗ ಜಿಲ್ಲೆಯ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಿದ ನಂತರ ಈ ವಿಷಯವನ್ನು ಪರಿಶೀಲಿಸಲಾಗುವುದು.

ಶ್ರೀ ಡಿ. ಜಿ. ಬಸವನಗೌಡ.—ಮಾನ್ಯ ಅಧ್ಯಕ್ಷರೆ, ತಾವು ಈ ಸಭೆಯ ಅಧ್ಯಕ್ಷರಾಗುವುದಕ್ಕೆ ಮುಂಚಿನಿಂದ ಆ ಕಡೆ ಬಸ್ಸಿನಲ್ಲಿ ಹೋಗುತ್ತಾ ಇದ್ದುದನ್ನು ನಾನು ನೋಡಿದ್ದೇನೆ. ಹೊನ್ನಾಳಿ ಬಸ್ ಸ್ಟ್ಯಾಂಡ್ ಯಾವರೀತಿ ಇದೆ ಎನ್ನುವುದು ತಮಗೆ ಗೊತ್ತಿದೆ. ಪುರಸಭೆಯವರು ೩೦-೪೦ ವರ್ಷಗಳ ಹಿಂದೆ ಕಟ್ಟಿರತಕ್ಕಂಥಾದ್ದು ಅದು. ಹರಿಹರ-ಶಿವಮೊಗ್ಗ ಹೆದ್ದಾರಿ ರಾಷ್ಟ್ರೀಕರಣವಾಗಿ ೧೫ ವರ್ಷ ಗಳಾಯಿತು. ಹೊನ್ನಾಳಿ ಪಟ್ಟಣದ ಮುಖಾಂತರ ಪ್ರತಿನಿತ್ಯ ಸುಮಾರು ೧೫೦ ಸರ್ಕಾರಿ ಬಸ್‌ಗಳು ಓಡಾಡುತ್ತಿರುತ್ತವೆ. ಅಲ್ಲಿ ಸರಿಯಾದ ಒಂದು ವ್ಯವಸ್ಥೆಯಿಲ್ಲ, ಮೂತ್ರಿಯಿಲ್ಲ. ನಾನು ವಿಧಾನ ಸಭೆಯ ಸದಸ್ಯನಾದಮೇಲೆ ಆರನೇ ಸಾರಿ ಇದರ ಬಗ್ಗೆ ಪ್ರಶ್ನೆಯನ್ನು ಹಾಕಿದ್ದೇನೆ. ದಯವಿಟ್ಟು ಮಾನ್ಯ ಮಂತ್ರಿಗಳು ಭರವಸೆಯನ್ನು ಕೊಡಬೇಕು ಅಲ್ಲಿ ಕಟ್ಟಿಡ ಕಟ್ಟಲಿಕ್ಕೆ ಜಾಗ ಕೊಡಿಸುತ್ತೇನೆ. ಓಜನ ಮಂತ್ರಿಗಳು ಆದರು ಆದ್ದರಿಂದ ಇನ್ನು ಮೇಲಾದರೂ ಹೊನ್ನಾಳಿಯಲ್ಲಿ ಬಸ್ ನಿಲ್ದಾಣವನ್ನು ಕಟ್ಟುತ್ತೇವೆ ಎಂದು ಭರವಸೆ ಕೊಡುತ್ತೀರಾ?

ಶ್ರೀ ಸಿದ್ದರಾಮಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಬಸವನಗೌಡರು ಹೇಳಿದಂತೆ ಶಿವಮೊಗ್ಗ ಹರಿಹರ ರಾಷ್ಟ್ರೀಯ ಹೆದ್ದಾರಿ ರಾಷ್ಟ್ರೀಕರಣವಾಗಿದೆ, ಅಲ್ಲಿ ಸುಮಾರು ಬಸ್ಸುಗಳು ಪ್ರತಿದಿನ ಓಡಾಡುತ್ತಿರುವುದು ನಿಜ. ಅಲ್ಲಿ ಪುರಸಭೆಯವರು ಕಟ್ಟಿರತಕ್ಕ ಬಸ್ ನಿಲ್ದಾಣವಿದೆ. ರಾತ್ರಿ ಹೊತ್ತು ಎರಡು ಬಸ್‌ಗಳು ಅಲ್ಲಿ ನಿಲ್ಲತಕ್ಕದ್ದು, ಬೇರೆ ಬಸ್‌ಗಳು ಅಲ್ಲಿ ಬಂದು ಹೋಗುತ್ತವೆ, ಅಲ್ಲಿ ಬಸ್ ನಿಲ್ದಾಣ ಆಗಬೇಕು ಎನ್ನುವುದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ, ಆಗಬೇಕು. ಶಿವಮೊಗ್ಗ ಜಿಲ್ಲೆಯ ಮಾರ್ಗಗಳು ಇನ್ನೂ ರಾಷ್ಟ್ರೀಕರಣವಾಗಿಲ್ಲ. ರಾಷ್ಟ್ರೀಕರಣವಾಗಿರತಕ್ಕ ಭಾಗಗಳಿಗೆ ಆದ್ಯತೆ ಕೊಡುತ್ತಿದ್ದೇವೆ. ಇಲ್ಲೂ ರಾಷ್ಟ್ರೀಕರಣ ಮಾಡಿದ ಮೇಲೆ ಬಸ್ ನಿಲ್ದಾಣವನ್ನು ಕಟ್ಟಲಿಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತೆ ಜಾಗ ಕೊಡಬೇಕು. ಪುರಸಭೆಯವರು ಕೊಡತಕ್ಕ ಜಾಗ ಆಗುವುದಿಲ್ಲ. ಬೇರೆ ಜಾಗ ಕೊಟ್ಟಮೇಲೆ ನಮ್ಮದೇ ಆದ ಸ್ವಂತ ಬಸ್ ನಿಲ್ದಾಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಮೈಸೂರು ರೇಷ್ಮೆ ಕಾರ್ಖಾನೆ ಕಾರ್ಮಿಕರ ಸಂಘ

೪೦೯. ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ).—ಮಾನ್ಯ ರೇಷ್ಮೆ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಶ್ವ ವಿಖ್ಯಾತ ಮೈಸೂರು ರೇಷ್ಮೆ ಕಾರ್ಖಾನೆ ಕಾರ್ಮಿಕರ ಸಂಘದ ಹಾಗೂ ಆಡಳಿತ ವರ್ಗಕ್ಕೂ ಕೈಗಾರಿಕಾ ಶಾಂತಿ ಒಪ್ಪಂದ ಆದದ್ದು ಯಾವಾಗ ?

ಆ) ಈ ಶಾಂತಿ ಒಪ್ಪಂದದಲ್ಲಿ ಒಪ್ಪಿದ ಯಾವ ಯಾವ ಬೇಡಿಕೆಗಳನ್ನು ಸರ್ಕಾರವು ಜಾರಿಗೊಳಿಸಿದೆ

ಇ) ಜಾರಿಗೊಳಿಸದೇ ಇರುವ ಬೇಡಿಕೆಗಳಾವುವು? ಇದಕ್ಕೆ ಕಾರಣಗಳೇನು ?

ಶ್ರೀ ಕೃಷ್ಣ (ರೇಷ್ಮೆ ಮತ್ತು ಪಶುಸಂಗೋಪನಾ ಸಚಿವರು).—

ಅ) ವ್ಯವಸ್ಥಾಪನೆ ಹಾಗೂ ಮೈಸೂರು ನೇಯಿಗೆ ಕಾರ್ಖಾನೆ ನಡುವಿನ ಹಿಂದಿನ ಶಾಂತಿ ಒಪ್ಪಂದವನ್ನು ದಿನಾಂಕ ೮-೪-೧೯೮೫ರಂದು ಮಾಡಿಕೊಳ್ಳಲಾಯಿತು.

ಆ) ಕಾರ್ಮಿಕರ ಇತರ ಬೇಡಿಕೆಗಳ ಪೈಕಿ ಪರಿಷ್ಕೃತ ವೇತನ ಶ್ರೇಣಿ ತುಟ್ಟಿಭತ್ಯೆ ಮನೆಬಾಡಿಗೆ ಭತ್ಯೆ ಮತ್ತು ಇತರ ಸೌಲಭ್ಯಗಳನ್ನು ಒಳಗೊಂಡಂತೆ ಒಟ್ಟು ೩೪ ಬೇಡಿಕೆಗಳನ್ನು ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಲಾಗಿದೆ.

೫) ಕಾರ್ಮಿಕರ ಜೊತೆ ಮಾಡಿಕೊಂಡ ಒಪ್ಪಂದದ ಪ್ರಕಾರ ಈ ಕೆಳಕಂಡ ಬೇಡಿಕೆಗಳನ್ನು ಪೂರ್ಣವಾಗಿ ಜಾರಿಗೊಳಿಸುವುದಕ್ಕೆ ಸಾಧ್ಯವಾಗಲಿಲ್ಲ ಧಾನ್ಯಗಳ ಮುಂಗಡ ಪಾವತಿ, ಸಮವಸ್ತ್ರಗಳ ಕೊಡಿಸುವಿಕೆ. ಕಾಲಾಚೀಲ, ಬೂಟ್ಸ್ ಹೆಚ್ಚುವರಿ ಸಮೂಹ ವಿಹಾರಾರ್ಥ ಪ್ರವಾಸ ಮನೆ ಕಟ್ಟಿಡದ ಮುಂಗಡ ಈ ಬೇಡಿಕೆಗಳನ್ನು ಈ ಕೆಳಕಂಡ ಕಾರಣಗಳಿಂದ ಜಾರಿಗೊಳಿಸಲಾಗಲಿಲ್ಲ.

೧ ಬಂಡವಾಳದ ಕೊರತೆ ಉತ್ಪಾದನಾ ವೆಚ್ಚದಲ್ಲಿನ ಹೆಚ್ಚಳದಿಂದ ಉತ್ಪಾದಿಸಲಾದ ರೇಷ್ಮೆ ವಸ್ತ್ರಗಳನ್ನು ಮಾರಾಟ ಮಾಡುವಲ್ಲಿನ ತೊಂದರೆಗಳು.

೨ ಉತ್ಪಾದಿಸಲಾದ ವಸ್ತ್ರಗಳಿಗೆ ಮಾರುಕಟ್ಟೆಯಲ್ಲಿ ಅಡತಡೆಗಳು

೩ ಪೂರ್ಣ ಪ್ರಮಾಣದ ಉತ್ಪಾದನೆಯನ್ನು ಪಡೆಯುವಲ್ಲಿನ ತೊಂದರೆಗಳು.

	ಉತ್ಪಾದನಾ ಗುರಿ	ಸಾಧಿಸಿದ ಉತ್ಪಾದನೆ
	ವಸ್ತ್ರಗಳು ಮೀಟರ್‌ಗಳಲ್ಲಿ	
ಏಪ್ರಿಲ್ ೮೮	೬೭,೯೧೫	೩೭,೯೭೨
ಮೇ ೮೮	೬೭,೯೧೫	೪೬,೬೦೨
ಜೂನ್ ೮೮	೬೭,೯೧೫	೪೧,೭೧೮
ಜುಲೈ ೮೮	೬೭,೯೧೫	೩೬,೬೩೪
ಆಗಸ್ಟ್ ೮೮	೬೭,೯೧೫	೩೪,೪೦೬

ಹೆಚ್ಚುವರಿ ನಷ್ಟ

ವರ್ಷ	ಮೈಸೂರು	ಕೆ.ಎಸ್.ಐ.ಸಿ.
೧೯೮೪-೮೫	(-) ೫೮.೧೫	(-) ೨೭೨.೮೪
೧೯೮೫-೮೬	(-) ೧೭.೮೪	(-) ೩೪೦.೪೨
೧೯೮೬-೮೭	(-) ೩೦.೯೭	(-) ೪೨೫.೯೧
೧೯೮೭-೮೮	(-) ೪೨.೬೧	(-) ೪೪೭ ೦೭

(ತಾತ್ಕಾಲಿಕ)

ಶ್ರೀ ವೆಂಕಾಚಲ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೆ, ೧೯೮೫ರಲ್ಲಿ ರೇಷ್ಮೆ ಕಾರ್ಖಾನೆಯಲ್ಲಿ ಆಡಳಿತ ಮಂಡಲಿಯವರಿಗೂ ಮತ್ತು ಅಲ್ಲಿಯ ಕಾರ್ಮಿಕರಿಗೂ ಒಂದು ಇಂಡಸ್ಟ್ರಿಯಲ್ ಟ್ರೂಸ್ ಆಯಿತು. ಇದು ಆಗಿ ೩ ವರ್ಷಗಳಾಯಿತು ಕಾರ್ಮಿಕರ ಳಿತ ಬೇಡಿಕೆಗಳಲ್ಲಿ ೩೪ ಬೇಡಿಕೆಗಳನ್ನು ಈಡೇರಿಸಿ ಇನ್ನು ೯ ಬೇಡಿಕೆಗಳನ್ನು ಈಡೇರಿಸಿಕೊಟ್ಟಿಲ್ಲ. ಆ ಬೇಡಿಕೆಗಳಲ್ಲಿ ಪ್ರಾಮುಖ್ಯವಾದುವು ಎಂದರೆ ಸಮವಸ್ತ್ರಗಳ ನೀಡುವಿಕೆ. ಬೂಟ್ಸ್, ಕಾಲುಚೀಲ ಇನ್ನೂ ಮುಂತಾದವು. ಇವು ಬಹಳ ಸುಲಭವಾಗಿ ಬಗೆಹರಿಸತಕ್ಕ ಬೇಡಿಕೆಗಳು. ಸಾಮಾನ್ಯವಾಗಿ ತಮಗೆ ತಿಳಿದಂತೆ ಕಾರ್ಖಾನೆಯಲ್ಲಿ ಇಂಡಸ್ಟ್ರಿಯಲ್ ಟ್ರೂಸ್‌ಗೆ ವಿರುದ್ಧವಾಗಿ ಯಾರಾದರೂ ನಡೆದುಕೊಂಡರೆ ಅಂಥವರನ್ನು ಅರೆಸ್ಟ್ ಮಾಡುತ್ತಾರೆ. ಆದರೆ ಇಲ್ಲಿ ಕಾರ್ಖಾನೆಯ ಆಡಳಿತ ಮಂಡಲಿಯವರು ಇಂಡಸ್ಟ್ರಿಯಲ್ ಟ್ರೂಸ್ ಪ್ರಕಾರ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಿಕೊಟ್ಟಿಲ್ಲ. ಆದ್ದರಿಂದ ಅವರ ಮೇಲೆ ಇದುವರೆಗೂ ಏಕೆ ಕ್ರಮವನ್ನು ತೆಗೆದುಕೊಂಡಿಲ್ಲ? ೧೯೮೫ ರಿಂದ ಲೇವರೆಗೆ ಈ ಬೇಡಿಕೆಗಳನ್ನು ಈಡೇರಿಸಿ ಕೊಡಲು ಆಗದೇ ಇರುವುದಕ್ಕೆ ಕೆಲವು ಕಾರಣಗಳನ್ನು ತಾವು ಕೊಟ್ಟಿದ್ದೀರಿ. ಇನ್ನೊಂದು ಪ್ರಶ್ನೆ ಪ್ರಮುಖವಾದುದು ಎಂದರೆ ಅಲ್ಲಿ ಲಾಸ್ ಆಗುವುದಕ್ಕೆ ಮುಖ್ಯ ಕಾರಣಗಳೇನೆಂಬುದನ್ನು ತಾವು ತಿಳಿಸಬೇಕು.

ಶ್ರೀ ಕೃಷ್ಣ.—ಮಾನ್ಯ ಸಭಾಧ್ಯಕ್ಷರೇ, ಈಗತಾನೇ ನನ್ನ ಉತ್ತರದಲ್ಲಿ ನಾವು ಯಾವ ಕಾರಣ ಕ್ಕೋಸ್ಕರವಾಗಿ ಅವರಿಗೆ ಈಡೇರಿಸಬೇಕಾದ ಬೇಡಿಕೆಗಳನ್ನು ನಿಲಿಸಿದ್ದೇವೆಂದು ಹೇಳಿದ್ದೇನೆ. ಉದಾ

ಹರಣಿಗೆ ಹೇಳುವುದಾದರೆ, ಈ ಕಾರ್ಖಾನೆಯಲ್ಲಿರತಕ್ಕ ಕಾರ್ಮಿಕರಿಗೆ ಬಹಳ ಹೆಚ್ಚಿನ ಸಂಬಳ ಸಾರಿಗೆ ಗಳನ್ನು ಕೊಡಲಾಗುತ್ತಿದೆ. ಬೇರೆ ಯಾವುದೇ ಖಾಸಗಿ ಕಾರ್ಖಾನೆಗಳಲ್ಲೂ ಇಷ್ಟು ಕೊಡುವುದಿಲ್ಲ. ಅಷ್ಟೇ ಅಲ್ಲ. ಉತ್ಪಾದನಾ ವೆಚ್ಚವನ್ನು ತೆಗೆದ ಕೊಂಡರೆ ಈ ಕಾರ್ಖಾನೆಯಲ್ಲಿ ೧ ವ್ಯಾಟರ್‌ಗೆ ೫೨ ರೂಪಾಯಿ ಆದರೆ ಖಾಸಗಿ ಕಾರ್ಖಾನೆಗಳಲ್ಲಿ ೧ ವ್ಯಾಟರ್‌ಗೆ ೧೫ ರೂಪಾಯಿ ಉತ್ಪಾದನಾ ವೆಚ್ಚ ಬೀಳುತ್ತದೆ. ಈ ಕಾರಣದಿಂದಾಗಿ ಮುಕ್ತ ಮಾರುಕಟ್ಟೆಯಲ್ಲಿ ಇರತಕ್ಕ ಪೈಪೋಟಿಯಲ್ಲಿ ಸ್ಪರ್ಧೆ ಮಾಡುವುದ ಕ್ಕಾಗುತ್ತಿಲ್ಲ. ಇಲ್ಲಿ ಉತ್ಪಾದನೆಯಾದ ಬಟ್ಟೆಯನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದಕ್ಕೆ ಆಗುತ್ತಿಲ್ಲ. ಸುಮಾರು ೬-೭ ಕೋಟಿ ರೂಪಾಯಿಗಳಷ್ಟು ಬೆಲೆಯ ಉತ್ಪಾದನಾ ಬಟ್ಟೆ ವಿಚಾರಗದ ಉಳಿದಿದೆ. ಕಾರ್ಮಿಕರ ಕೆಲವು ಬೇಡಿಕೆಗಳನ್ನು ನಾವು ಈಡೇರಿಸಿದ್ದೇವೆ ಆದರೆ ಕಾಲುಚೀಲ, ಬೂಟು ಸಮವಸ್ತ್ರ ಇಂಥ ಕೆಲವು ಬೇಡಿಕೆಗಳನ್ನು ಆರ್ಥಿಕ ತೊಂದರೆಯಿಂದಾಗಿ ಈಡೇರಿಸಲು ಸಾಧ್ಯವಾಗಿಲ್ಲ. ಈ ಕಾರ್ಖಾನೆಯ ಉತ್ಪಾದನೆ ವಿಚಾರ್ತು ಸಾಧಿಸಿದ ಗುರಿಯ ಬಗ್ಗೆ ಹೇಳಿದ್ದೇನೆ. ಕಾರ್ಮಿಕರೂ ಕೂಡ ಉತ್ಪಾದನೆಗೆ ಯಾವುದೇ ರೀತಿಯಿಂದಲೂ ಧಕ್ಕೆ ಉಂಟಾಗದಂತೆ ಕಾರ್ಖಾನೆಯವರ ಜೊತೆ ಸಹಕರಿಸಿದರೆ ಅವರ ಉಳಿದ ಬೇಡಿಕೆಗಳನ್ನೂ ಕೂಡ ನಾವು ಈಡೇರಿಸುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಕಾರ್ಮಿಕರು ಈ ದಿಸೆಯಲ್ಲಿ ತಮ್ಮ ಸಹಕಾರವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಕೃಷ್ಣ (ರೇಷ್ಮೆ ಖಾತೆ ಸಚಿವರು).—ಮಾನ್ಯ ಸಭಾಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಉತ್ತರಗಳನ್ನು ಮಂಡಿಸಲಾಯಿತು

ಬೆಳ್ತಂಗಡಿಯಿಂದ ಬೆಂಗಳೂರಿಗೆ ಸುಖಾಸೀನ ಬಸ್ಸನ್ನು ಒದಗಿಸುವುದು

೪೦೬೨ **ಶ್ರೀ ಕೆ. ವಸಂತ ಬಂಗೇರ,** (ಬೆಳ್ತಂಗಡಿ).—ಮಾನ್ಯ ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೆಳ್ತಂಗಡಿಯಿಂದ ಧರ್ಮಸ್ಥಳ-ಗುಡ್ಡೆ ಮಾರ್ಗವಾಗಿ ಬೆಂಗಳೂರಿಗೆ ಸುಖಾಸೀನ ಬಸ್ ಸರ್ವೀಸನ್ನು ಪ್ರಾರಂಭಿಸಬೇಕೆಂಬ ಬೇಡಿಕೆ ಕೆಲವು ವರ್ಷಗಳಿಂದ ಇದ್ದರೂ ಈ ಕುರಿತು ವಿಳಂಬವಾಗುತ್ತಿರಲು ಕಾರಣಗಳೇನು ?

ಆ) ಈಗಿರುವ ಅರೆಸುಖಾಸೀನ ಬಸ್ಸುಗಳಲ್ಲಿ ಬೆಂಗಳೂರಿಗೆ ಸೀಟು ಸಿಗದೆ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಬೆಳ್ತಂಗಡಿ-ಧರ್ಮಸ್ಥಳ ಮಾರ್ಗವಾಗಿ ಬೆಂಗಳೂರಿಗೆ ಸುಖಾಸೀನ ಬಸ್ ಸೌಕರ್ಯವನ್ನು ಎಷ್ಟು ಸಮಯದೊಳಗೆ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತದೆ ?

ಶ್ರೀ ಸಿದ್ದರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ಬೆಳ್ತಂಗಡಿಯಿಂದ ಧರ್ಮಸ್ಥಳ ಮಾರ್ಗವಾಗಿ ಬೆಂಗಳೂರಿಗೆ ಸುಖಾಸೀನ ಬಸ್ ಸರ್ವೀಸನ್ನು ಬಯಸುವ ಪ್ರಯಾಣಿಕರ ಒತ್ತಡ ಅಷ್ಟಾಗಿಲ್ಲದಿರುವುದರಿಂದ ಈ ಬಸ್ಸು ಸರ್ವೀಸನ್ನು ಪ್ರಾರಂಭಿಸಿಲ್ಲ.

ಆ) ಬಂದಿಲ್ಲ

ಇ) ಪ್ರಯಾಣಿಕರ ಒತ್ತಡದ ಬಗ್ಗೆ ಸರ್ವೆ ಮಾಡಿಸಿ ಅವಶ್ಯಕತೆ ಇದ್ದಲ್ಲಿ ಪರಿಶೀಲಿಸಲಾಗುವುದು.